ಶಿವಮೊಗ್ಗ ವೈದ್ಯಕೀಯ ಕಾಲೇಜಿನಲ್ಲಿ ಸಿಬ್ಬಂದಿ ನೇಮಕಾತಿ ಬಗ್ಗೆ

536 (497) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಶಿವಮೊಗ್ಗ ಮೆಡಿಕಲ್ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್ ಯಾವಾಗ ಆರಂಭಿಸಲಾಯಿತು;

ಆ) ಈ ಕಾಲೇಜಿನ ವಿವಿಧ ಕಾಮಗಾರಿಗಳಿಗಾಗಿ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಮತ್ತು ಎಷ್ಟು ಹಣ ವೆಚ್ಚ ಮಾಡಲಾಗಿದೆ; (ಕಾಮಗಾರಿಯ ವಿವರ);

ಇ) ಕಾಲೇಜು ಆರಂಭ ದಿನದಿಂದ ರೋಸ್ಟರ್ ಪದ್ಧತಿಯನ್ನು ಅಳವಡಿಸಿ ವೈದ್ಯರು/ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದೆಯೇ; (ಮಾಡಿದ್ದರೆ ಪೂರ್ಣ ವಿವರ ನೀಡುವುದು);

ಈ) ಮಾಡದೇ ಇದ್ದರೆ ಯಾವ ಕಾರಣಕ್ಕಾಗಿ ಮಾಡಿಲ್ಲ; (ವಿವರ ನೀಡುವುದು);

ಉ) ವೈದ್ಯರು, ಉಪನ್ಯಾಸಕರು ಮತ್ತು ವಿವಿಧ ಸಿಬ್ಬಂದಿಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ; ವಿವರ;

ಊ) ಸರ್ಕಾರ/ಇಲಾಖೆ ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ ಅಥವಾ ಹೊರಗುತ್ತಿಗೆದಾರರಿಂದ ರೋಸ್ಟರ್ ಅಳವಡಿಸಿಕೊಂಡು ನೇಮಕಾತಿ ಮಾಡಿಕೊಳ್ಳಲಾಗಿದೆಯೇ; (ವಿವರ ನೀಡವುದು) ?

ಶ್ರೀ ಎ.ಎಸ್. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) 2007–08

ಆ) ಅನುಬಂಧದಲ್ಲಿ ತೋರಿಸಿದೆ.

ಇ) ಇಲ್ಲ

ಈ) ಅಗತ್ಯ ಸಂಖ್ಯೆಯ ಸ್ನಾತಕೋತ್ತರ ಪದವಿ ಮತ್ತು ಬೋಧನಾನುಭವವಿರುವ ಅಭ್ಯರ್ಥಿಗಳು ನೇಮಕಾತಿಗೆ ಮುಂದೆ ಬರದಿರುವುದರಿಂದ.

ಉ) ಶೈಕ್ಷಣಿಕ ಅರ್ಹತೆ, ಬೋಧನಾನುಭವ ಮತ್ತು ಮೌಖಿಕ ಪರೀಕ್ಷೆ.

ಊ) ಸಂಸ್ಥೆಯು ನೇರನೇಮಕಾತಿ ಮಾಡಿಕೊಂಡಿದೆ. ಹೊರಗುತ್ತಿಗೆದಾರರದಿಂದ ಸೇವೆಯನ್ನು ಮಾತ್ರ ಪಡೆಯುತ್ತಿದೆ.

ಅನುಬಂಧ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ ಬಿಡುಗಡೆಯಾದ ಅನುದಾನ ಮತ್ತು ವೆಚ್ಚ ಹಾಗೂ ಕಾಮಗಾರಿಗಳ ವಿವರ

ಶ್ರೀ ಕೆ.ಜಿ. ಕುಮಾರಸ್ವಾಮಿ ಶಾಸಕರು, ಶಿವಮೊಗ್ಗ ಗ್ರಾಮಾಂತರ ಇವರ ಚುಕ್ಕೆ ಗುರುತಿನ ಸಂಖ್ಯೆ 497 ಕ್ಕೆ ಸಂಬಂಧಿಸಿದಂತೆ ಮಾಹಿತಿ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಬಿಡುಗಡೆಯಾದ ಅನುದಾನ	ವೆಚ್ಚ	ಸಕಾಮಗಾರಿ ವಿವರ
1.	2005–06	2000.00	2000.00	**1ನೇ ಹಂತದ ಕಟ್ಟಡ ಕಾಮಗಾರಿ** 1. ಕಾಲೇಜು ಕಟ್ಟಡ ಅ) ನೆಲ ಮಹಡಿ ಆ) 1ನೇ ಮಹಡಿ 2. ವಿದ್ಯಾರ್ಥಿಗಳ ವಸತಿ ನಿಲಯ ಅ) ನೆಲ ಮಹಡಿ 3. ವಿದ್ಯಾರ್ಥಿನಿಯರ ವಸತಿ ನಿಲಯ ಅ) ನೆಲಮಹಡಿ (ಕಾಮಗಾರಿ ಪೂರ್ಣಗೊಂಡಿದೆ)
2	2007–08	4000.00	4000.00	**2ನೇ ಹಂತದ ಕಟ್ಟಡ ಕಾಮಗಾರಿ** 1. ಕಾಲೇಜು ಕಟ್ಟಡ ಅ) 2ನೇ ಮಹಡಿ ಆ) 3ನೇ ಮಹಡಿ ಇ) ಪರೀಕ್ಷಾ ಕೊಠಡಿ ಈ) ಅಡಿಟೋರಿಯಂ 2.ವಿದ್ಯಾರ್ಥಿಗಳ ವಸತಿ ನಿಲಯ ಅ) 1ನೇ ಮಹಡಿ ಆ) 2ನೇ ಮಹಡಿ 3.ವಿಧ್ಯಾರ್ಥಿನಿಯರ ವಸತಿ ನಿಲಯ ಅ) 1ನೇ ಮಹಡಿ ಆ) 2ನೇ ಮಹಡಿ, ಇ) 3ನೇಮಹಡಿ 4.ವೈದ್ಯರ ವಸತಿ ನಿಲಯ ಅ) ನೆಲ ಮಹಡಿ ಆ) 1ನೇ ಮಹಡಿ ಇ) 2ನೇ ಮಹಡಿ (ಕಾಮಗಾರಿ ಪೂರ್ಣಗೊಂಡಿದೆ)
3.	2009–10	650.00	650.00	**ಮೆಗ್ಗಾನ್ ಆಸ್ಪತ್ರೆ ಮೇಲ್ದರ್ಜೆಗೆರಿಸಲು** ಹಾಲಿ ಇರುವ ಕಟ್ಟಡದ 3ನೇ ಹಾಗೂ 4ನೇ ಮಹಡಿ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಶಿಲ್ಪ ನಕ್ಷೆಯಂತೆ ಬಿಟ್ಟು ಹೋದ ಭಾಗದಲ್ಲಿ ನೆಲಮಹಡಿಯಿಂದ 4ನೇ ಮಹಡಿಯವರಿಗೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 3 & 4ನೇ ಮಹಡಿ ಭಾಗಶಃ ಪೂರ್ಣಗೊಂಡಿದೆ.
4	2009–10	76.00	48.00	ದ್ರವ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಾಣ ಮಾಡಲು

ನಿರ್ದೇಶಕರು
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಶಿವಮೊಗ್ಗ